# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಪ್ರಕಾಶ್ ಕೆ ರಾಥೋಡ್ (ನಾಮನಿರ್ದೇಶನ ಹೊಂದಿದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **907** |
| ಉತ್ತರಿಸಬೇಕಾದ ದಿನಾಂಕ | : | 21.09.2022 |
| ಉತ್ತರಿಸಬೇಕಾದ ಸಚಿವರು | : | ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ವಿಜಯಪುರ ಜಿಲ್ಲೆಯಲ್ಲಿ ಬಸವ ವಸತಿ ಯೋಜನೆ, ಅಂಬೇಡ್ಕರ್ ನಿವಾಸ ಯೋಜನೆ, ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿಯಲ್ಲಿ ಪೂರ್ಣಗೊಂಡಿರುವ ಮನೆಗಳೆಷ್ಟು ; (ವಿವರ ನೀಡುವುದು) | 2010-11 ರಿಂದ ಈವರೆಗೆ ವಿಜಯಪುರ ಜಿಲ್ಲೆಯಲ್ಲಿ ಬಸವ ವಸತಿ ಯೋಜನೆ, ಅಂಬೇಡ್ಕರ್ ನಿವಾಸ್ ಯೋಜನೆ, ಪ್ರಧಾನ ಮಂತ್ರಿ ಆವಾಸ್ ಯೋಜನೆಗಳಡಿಯಲ್ಲಿ 123310 ಮನೆಗಳು ಅನುಮೋದನೆಯಾಗಿದ್ದು, ಈ ಪೈಕಿ 87570 ಮನೆಗಳು ಪೂರ್ಣಗೊಂಡಿದ್ದು, 20384 ಮನೆಗಳು ಪ್ರಗತಿಯಲ್ಲಿದ್ದು, ಸಂಪೂರ್ಣ ವಿವರಗಳು ಕೆಳಕಂಡಂತಿದೆ. |

| ಕ್ರ. ಸಂ | ಯೋಜನೆ | ಅನುಮೋದನೆ | ಪೂರ್ಣಗೊಂಡ ಮನೆಗಳು | ಪ್ರಗತಿಯಲ್ಲಿರುವ ಮನೆಗಳು | ಪ್ರಾರಂಭವಾಗದ ಮನೆಗಳು | ಬ್ಲಾಕ್ ಆದ ಮನೆಗಳು |
|---|---|---|---|---|---|---|
| 1. | ಬಸವ ವಸತಿ | 74213 | 58471 | 8951 | 3566 | 3225 |
| 2. | ಡಾ : ಬಿ.ಆರ್. ಅಂಬೇಡ್ಕರ್ ನಿವಾಸ್ (ಗ್ರಾ) | 21471 | 16284 | 3816 | 983 | 388 |
| 3. | ಡಾ : ಬಿ.ಆರ್. ಅಂಬೇಡ್ಕರ್ ನಿವಾಸ್(ನ) | 5281 | 4142 | 715 | 120 | 304 |
| 4. | ಪ್ರಧಾನ ಮಂತ್ರಿ ಆವಾಸ್ (ಗ್ರಾ) | 3665 | 2263 | 858 | 17 | 527 |
| 5. | ಪಿ.ಎಂ.ಎ.ವೈ(ಯು) (ಎ.ಹೆಚ್.ಪಿ) | 9896 | 2991 | 3776 | 3129 | 0 |
| 6. | ಪಿ.ಎಂ.ಎ.ವೈ(ಯು)-BLC Non-Convergence | 8784 | 3419 | 2268 | 3097 | 0 |
| | ಒಟ್ಟು | 123310 | 87570 | 20384 | 10912 | 4444 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಆ) | ಮನೆ ಕಟ್ಟುವ ಕಾರ್ಯ ಪ್ರಗತಿಯಲ್ಲಿರುವ ಮನೆಗಳ ಕಾಮಗಾರಿಗಳನ್ನು ಪೂರೈಸಲು ನಿಗದಿಯಾಗಿರುವ ಸಮಯ ಎಷ್ಟು ; | ವಸತಿ ಯೋಜನೆಯ ಮನೆ ಮಾರ್ಗಸೂಚಿಗಳ ಪ್ರಕಾರ ವಸತಿ ಯೋಜನೆಗಳಡಿ ಆಯ್ಕೆಯಾದ ಫಲಾನುಭವಿಗಳು ನಿಗಮದ ಅನುಮೋದನೆ ಪಡೆದ ನಂತರ 90 ದಿನಗಳೊಳಗೆ ಮನೆಯ ಕಾಮಗಾರಿಯನ್ನು ಪ್ರಾರಂಭಿಸಿ, ಒಂದು ವರ್ಷದೊಳಗಾಗಿ ಮನೆಯನ್ನು ಪೂರ್ಣಗೊಳಿಸಬೇಕಾಗಿರುತ್ತದೆ. ಆದಾಗ್ಯೂ ಮನೆ ನಿರ್ಮಾಣದ ಅವಧಿಯಲ್ಲಿ ಮಳೆಗಾಲ ಹಾಗೂ ಫಲಾನುಭವಿಗಳ ವೈಯಕ್ತಿಕ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡು ಮನೆ ಪೂರ್ಣಗೊಳಿಸಲು ಗರಿಷ್ಠ ಅವಕಾಶವನ್ನು ಕಲ್ಪಿಸಿಕೊಡಲಾಗುತ್ತಿದೆ. |
| ಇ) | ಒಟ್ಟು ರದ್ದಾಗಿರುವ ಮನೆಗಳೆಷ್ಟು ; ರದ್ದಾಗಲು ಕಾರಣಗಳೇನು ; ಇವುಗಳನ್ನು ಪುನರ್ ಪರಿಶೀಲಿಸಲು ಕೈಗೊಂಡ ಕ್ರಮಗಳೇನು ? | ವಿವಿಧ ವಸತಿ ಯೋಜನೆಗಳಡಿಯಲ್ಲಿ ಆಯ್ಕೆಯಾದ ಫಲಾನುಭವಿಗಳಿಗೆ ಕಾಮಗಾರಿ ಆದೇಶ ನೀಡಿದ ನಂತರ ಸಾಕಷ್ಟು ಬಾರಿ ತಿಳುವಳಿಕೆ ಪತ್ರಗಳನ್ನು ನೀಡಿದಾಗ್ಯೂ ನಿಗದಿತ ಸಮಯದಲ್ಲಿ ಕಾಮಗಾರಿಯನ್ನು ಪ್ರಾರಂಭ ಮಾಡಿಕೊಳ್ಳದ ಮನೆಗಳನ್ನು ರದ್ದುಪಡಿಸಲು ಕ್ರಮ ವಹಿಸಲಾಗುತ್ತಿದೆ. |

| ಕ್ರ.ಸಂ | ಪ್ರಶ್ನೆ | ಉತ್ತರ |
| --- | --- | --- |
| | | ಈ ಬಗ್ಗೆ ದಿನಾಂಕ:29.01.2020 ರಂದು ನಡೆದ ಸಚಿವ ಸಂಪುಟದ ಉಪ ಸಮಿತಿ 2 ನೇ ಸಭೆಯಲ್ಲಿ ಬಸವ ವಸತಿ ಯೋಜನೆ, ಡಾ: ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆಯಡಿಯಲ್ಲಿ ವಿವಿಧ ಕಾರಣಗಳಿಂದ ರದ್ದು ಮಾಡಲಾಗಿದ್ದು, ರದ್ದಾದ ಎಲ್ಲಾ ಮನೆಗಳನ್ನು ಅನ್‌ಬ್ಲಾಕ್ ಮಾಡಿ, 45 ದಿವಸಗಳ ಕಾಲಾವಕಾಶ ನೀಡಿ, ಅಂದರೆ 31.03.2020 ರೊಳಗೆ ಪ್ರಾರಂಭಗೊಳ್ಳುವ ಮನೆಗಳನ್ನು ಜಿಪಿಎಸ್‌ಗೆ ಅಳವಡಿಸಿ, ಪ್ರಗತಿಗೆ ಪರಿಗಣಿಸಿಕೊಳ್ಳಲು ಸೂಚಿಸಲಾಗಿದ್ದು, ಅದರಂತೆ ಗರಿಷ್ಠ ಅವಕಾಶವನ್ನು ನೀಡಿದ ನಂತರ 4444 ಮನೆಗಳನ್ನು ವಿಜಯಪುರ ಜಿಲ್ಲೆಯಲ್ಲಿ ರದ್ದುಪಡಿಸಲಾಗಿದೆ.<br><br>ಈ ರೀತಿಯಾಗಿ ರದ್ದಾದ ಮನೆಗಳಲ್ಲಿ ಒಂದು ಬಾರಿಯು ವಸತಿ ಸೌಲಭ್ಯವನ್ನು ಪಡೆಯದೇ ರದ್ದಾದ ಫಲಾನುಭವಿಗಳಿಗೆ ಮರು ಆಯ್ಕೆಗೆ ಅವಕಾಶ ಕಲ್ಪಿಸಲು ಕುರಿತಂತೆ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ. |

ಸಂಖ್ಯೆ :ವಇ 411 ಹೆಚ್‌ಎಂ 2022

(ವಿ. ಸೋಮಣ್ಣ)
ವಸತಿ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ಸಚಿವರು